# ಪ್ರಥಮ ದರ್ಜೆಯ ನ್ಯಾ ಯಿಕ ದಂಡಾಧಿಕಾರಿಗಳ ನ್ಯಾ ಯಾಲಯ, ಸೇಡಂ.

ಸಿ.ಸಿ. ನಂಃ 443/2015 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 05-03-2026

ಹೆಸರು : ದೇವೀಂದ್ರಪ್ಪ

ತಂದೆ ಹೆಸರು : ಕಾಶಪ್ಪ

ವಯಸ್ಸು : 32 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕೋಡ್ಲಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿತರು ಗೊತ್ತು. ಆರೋಪಿತರು ಮತ್ತು ನನ್ನ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹೋಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಪಿರ್ಯಾದನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ವಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ:

ದಿಃ13-04-2015 ರಂದು ಸಾಯಂಕಾಲ 07-00 ಗಂಟೆ ಸುಮಾರಿಗೆ ಖೊಡ್ಲಾಗೇಟ್ ಹತ್ತಿರ ನಡೆದು ಕೊಂಡು ಬರುತ್ತಿರುವಾಗ 1 ರಿಂದ 3 ನೇ ಆರೋಪಿತರು ಬಂದು ನನಗೆ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಿಲ್ಲ. ಆಗ ಅವರಿಗೆ ಯಾಕೆ ಸುಮ್ಮನೆ ಕಿರಿ ಕಿರಿ ಮಾಡುತ್ತೀರ ಅಂತಾ ಕೇಳಿದಕ್ಕೆ 1 ನೇ ಆರೋಪಿತನು ಕೈಯಿಂದ ಚೇರಿಗೆ ಹೊಡೆದು ಗುಪ್ತಗಾಯ

ಮಾಡಿದನು ಎಂದರೆ ಸರಿಯಿಲ್ಲ. 2 ನೇ ಆರೋಪಿತನು ಕುಸ್ತಿಗೆ ಬಿದ್ದು ಕಲ್ಲಿನಿಂದ ಟೊಂಕಕ್ಕೆ ಹೊಡೆದು ಗುಪ್ತಗಾಯ ಪಡಿಸಿದನು ಎಂದರೆ ಸರಿಯಿಲ್ಲ. ನಂತರ ಚಾಸಾ 4 ರಿಂದ 5 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಿಲ್ಲ. ಜಗಳ ಬಿಟ್ಟು ಹೊಗುವಾಗ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಕಲ್ಲು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಲು ನಿರಾಕರಿಸಿರುವುದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

Accused-1 present. Counsel for accused present and filed application U/sec 70(2) of CRPC seeking recall of NBW issued against the accused. Heard, perused the accused has made out sufficient reason to the recall of NBW issued against them.

Hence NBW issued against accused-1 is hereby recalled on penalty of Rs.100/-.

A-2 absent. Counsel for accused field EP. Same is heard, perused and allowed for a day.

CW.1 is present and examined as PW-1. Ex.P-1, E.P-1(a) and MO NO.1 is marked. Prayer of the learned APP to summon other witnesses is rejected as material witness is turned hostile.

Sec.313 statement of the accused is dispensed with as there is no incriminating evidence. For compliance. Call on 06-03-2026.